ಬೆಂಗಳೂರಿನ ಬಸವೇಶ್ವರ ವೃತ್ತದ ಬಳಿ ಮಹಾ ನಗರ ಪಾಲಿಕೆಯವರು ನಿರ್ಮಿಸಿರುವ ಪ್ಲಾನ್‌ಟೋರಿಯಂ ಪ್ರಾರಂಭ

೪೪೧ (೧೨೪೧) ಶ್ರೀ ಪಿ. ಸಿ. ಸಿದ್ಧನಗೌಡರ್ (ಕಲಘಟಗಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ: —

ಅ) ಬೆಂಗಳೂರಿನ ಬಸವೇಶ್ವರ ವೃತ್ತದ ಬಳಿ ಮಹಾ ನಗರ ಪಾಲಿಕೆಯವರು ನಿರ್ಮಿಸಿರುವ ಪ್ಲಾನ್‌ಟೋರಿಯಂನ್ನು ಯಾವಾಗ ಪ್ರಾರಂಭಿಸಲಾಯಿತು ?

ಆ) ಈ ಪ್ಲಾನ್‌ಟೋರಿಯಂ ನಲ್ಲಿ ಒಂದು ಪ್ರದರ್ಶನದ ಅವಧಿಯಲ್ಲಿ ಎಷ್ಟು ಜನ ವೀಕ್ಷಕರಿಗೆ ಅವಕಾಶ ಕಲ್ಪಿಸಲಾಗಿದೆ ?

ಇ) ಇದರಿಂದ ಸರ್ಕಾರಕ್ಕೆ ಇದುವರೆವಿಗೆ ಎಷ್ಟು ಲಾಭ ಬಂದಿದೆ ?

ಈ) ರಾಷ್ಟ್ರೀಯ ರಜಾ ದಿನಗಳಂದು ಈ ಪ್ಲಾನ್‌ಟೋರಿಯಂನ್ನು ಸಾರ್ವಜನಿಕರು ವೀಕ್ಷಿಸಲು ಉಚಿತವಾಗಿ ಪ್ರವೇಶಾವಕಾಶವನ್ನು ಕಲ್ಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು. —

ಅ) ೨–೧೨–೧೯೮೯ ರಿಂದ

ಆ) ೨೧೦

ಇ) ಆದಾಯಕ್ಕಿಂತ. ಮಾಡಿರುವ ಖರ್ಚುವು ಹೆಚ್ಚಾಗಿರುತ್ತದೆ. ಆದಾಗ್ಯೂ ದಿನಾಂಕ: ೨೦–೬–೯೦ರ ವರೆಗೆ ಒಟ್ಟು ಸ್ವೀಕೃತಿ ರೂ. ೨.೯೪ ಲಕ್ಷಗಳು ಜಮಾ ಆಗಿರುತ್ತದೆ.

ಈ) ಇಲ್ಲ.

ಹೆಬ್ಬಾಳ ಗ್ರಾಮದ ಚಿಕ್ಕತಾಯಮ್ಮ ಅವರಿಗೆ ಪಹಣಿ ಮತ್ತು ಖಾತೆಯನ್ನು ಬದಲಾವಣೆ ಮಾಡದೆ ಕಿರುಕುಳ ನೀಡುತ್ತಿರುವ ಬಗ್ಗೆ

೪೪೨(೧೦೩೬) ಶ್ರೀ ರಾಮಲಿಂಗಾರೆಡ್ಡಿ (ಜಯನಗರ). —ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಬೆಂಗಳೂರು ಉತ್ತರ ತಾಲ್ಲೂಕಿನ ಹೆಬ್ಬಾಳ ಗ್ರಾಮದಲ್ಲಿ ವಾಸವಾಗಿರುವ ಶ್ರೀಮತಿ ಚಿಕ್ಕತಾಯಮ್ಮ ಮತ್ತು ಅವರ ಮಗ ಆರ್. ಮುನಿರೆಡ್ಡಿಯವರು ಎಂಬುವವರಿಂದ ಸದರಿ ಗ್ರಾಮದ ಸರ್ವೆ ನಂ. ೬೭, ೬೨, ೧೧೧ ಮುಂತಾದ ಆಸ್ತಿ ಜಮೀನಿನ ಪಹಣಿ ಮತ್ತು ಖಾತೆಯನ್ನು ಅವರ ಹೆಸರಿಗೆ ನೀಡದೆ ಕಳೆದ ೧೫ ತಿಂಗಳುಗಳಿಂದ ಕಿರುಕುಳ ನೀಡುತ್ತಿರುವುದು ಸರ್ಕಾರದವರಿಗೆ ಗೊತ್ತಿದೆಯೆ?

ಆ) ಈ ರೀತಿ ವಿಳಂಬ ಮಾಡಲು ಕಾರಣಗಳೇನು?

ಇ) ಹೆಬ್ಬಾಳ ಗ್ರಾಮ ಪಂಚಾಯಿತಿಯಲ್ಲಿರುವ ಕಂದಾಯ ವಸೂಲಿಗಾರ ಪಟೇಲ್ ಶ್ರೀ ಹೆಚ್. ರಾಜಣ್ಣನು ಅಲ್ಲಿನ ಜನರಿಗೆ ಕೆಲಸ ಕಾರ್ಯಗಳನ್ನು ಮಾಡಿಸಿಕೊಡಿ ಎಂದು ಮೇಲಿನ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿ ತೋದರೆ ಕೊಡುತ್ತಿರುವ ಬಗ್ಗೆ ಸರ್ಕಾರದವರು ಕೈಕೊಳ್ಳುವ ಕ್ರಮಗಳೇನು?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು). —

ಅ) ಪಹಣಿ ಮತ್ತು ಖಾತೆ ಬದಲಾವಣೆ ಮಾಡುವಲ್ಲಿ ವಿಳಂಬವಾಗಿದೆ.

ಆ) ಸರ್ವೆ ನಂ. ೬೨, ೬೭ ಮತ್ತು ೧೧೧ ಜಂಟಿಯಾಗಿ ಖಾತೆಗೆ ಆದೇಶವಾಗಿದ್ದರಿಂದ ಪ್ರತ್ಯೇಕಿಸಲು ಜಂಟಿದಾರರು ಒಮ್ಮತಕ್ಕೆ ಬಂದಿರುವುದಿಲ್ಲವಾದ್ದರಿಂದ ವಿಳಂಬವಾಗಿರುತ್ತದೆ.

ಇ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಇದು ನಿಜವಾದಲ್ಲಿ ತಕ್ಷಣ ಕ್ರಮ ತೆಗೆದುಕೊಳ್ಳಲಾಗುವುದು.